**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 137/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಮಹೇಶ್ವರ | | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ ಹೆಸರು | ಃ ಅಪ್ಪಯ್ಯ | | **17.11.2021** |
| ವಯಸ್ಸು | ಃ 72 ವರ್ಷ | | |
| ವೃತ್ತಿ | ಃ ಸಮಾಜ ಸೇವೆ | | ಪಿಡಬ್ಲ್ಯೂ ಃ 03 |
| ವಾಸ ಸ್ಥಳ | ಃ ಮೈಸೂರು | | ಸಿಡಬ್ಲ್ಯೂ ಃ 02 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

ನನಗೆ ಚಾಸಾ-1 ಮತ್ತು 3ರವರ ಪರಿಚಯ ಇದೆ. ಚಾಸಾ-1ರವರು ಚಾಮರಾಜಪುರಂನಲ್ಲಿ ವಾಸ ಇದ್ದಾರೆ. ದಿನಾಂಕ 21.08.2019ರಂದು ಚಾಸಾ-1ರವರ ಮನೆಯ ಬಳಿ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಪೊಲೀಸರು ಒಂದು ಮಹಜರ ಮಾಡಿದ್ದು ಅದಕ್ಕೆ ನನ್ನ ರುಜು ಪಡೆದಿರುತ್ತಾರೆ. ಚಾಸಾ-1ರವರ ಮನೆಯಲ್ಲಿ ಅವರ ತಾಯಿಯ ಏಳು ಚಿನ್ನದ ಬಳೆಗಳು ಕಳ್ಳತನ ಆಗಿದ್ದ ಬಗ್ಗೆ ಮಹಜರ ಬರೆದಿದ್ದರು. ಮಹಜರನಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ಅದನ್ನು ನಿಪಿ-5(ಎ) ಎಂದು ಗುರುತಿಸಿದೆ. ಚಾಸಾ-3 ಸಹ ನನ್ನ ಜೊತೆ ರುಜು ಮಾಡಿರುತ್ತಾರೆ. ಚಾಸಾ-1 ಮತ್ತು ಅವರ ತಾಯಿ ಸಹ ಮಹಜರ ಸಮಯದಲ್ಲಿ ಹಾಜರಿದ್ದರು. ಮಹಜರನ್ನು ಸುಮಾರು ಒಂದು ಗಂಟೆಗಳ ಕಾಲ ಬರೆದರು. ಸ್ಥಳದಲ್ಲಿ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿಗೆ ಮು.ಮಾ-1ರ ಅಂಡರವೀಯರ್ ತೋರಿಸಲಾಗಿ, ಅದು ಸ್ಥಳದಲ್ಲಿ ಬಿದ್ದಿದ್ದು ಅದನ್ನು ಪೊಲೀಸರು ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

2. ಚಾಸಾ-1ರವರ ಮನೆಯ ಪಕ್ಕದಲ್ಲಿ ಓಂಕಾರ್ ಕಾರ ಶೋ ರೂಂ ಇದ್ದು ಅಲ್ಲಿದ್ದ ಸಿಸಿಟಿವಿ ಕ್ಯಾಮೆರಾದ ಫುಟೇಜ್‌ಗಳನ್ನು ಕೂಡ ಪೊಲೀಸರು ಪಡೆದುಕೊಂಡರು. ಈ ಬಗ್ಗೆ ಪೊಲೀಸರು ಮಹಜರ ಬರೆದಿದ್ದು ಅದಕ್ಕೆ ರುಜು ಮಾಡಿರುತ್ತೇನೆ. ಮಹಜರ ನಿಪಿ-11 ಎಂದು ಸಾಕ್ಷಿ ರುಜುವನ್ನು ನಿಪಿ-11(ಎ) ಎಂದು ಗುರುತಿಸಿದೆ. ಸಿಸಿಟಿವಿಯಲ್ಲಿ ಒಬ್ಬ ವ್ಯಕ್ತಿ ಚಾಸಾ-1ರವರ

ಮನೆಯ ಒಳಗೆ ಹೋಗಿ ಹೊರಗಡೆ ಬಂದಿರುವುದು ದಾಖಲಾಗಿತ್ತು. ಇದರ ಡಿವಿಡಿಯನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ. ಸದರಿ ಸಿಡಿಯನ್ನು (ತಕರಾರಿಗೆ ಒಳಪಟ್ಟು) ನಿಪಿ-12 ಎಂದು ಗುರುತಿಸಿದೆ. ಆ ದಿನ ಸಿಸಿಟಿವಿಯಲ್ಲಿ ಕಂಡ ವ್ಯಕ್ತಿ ನ್ಯಾಯಾಲಯದೆದುರು ಹಾಜರಿರುವ ಆರೋಪಿ ಆಗಿರುತ್ತಾನೆ. ಇದನ್ನು ದಿನಾಂಕ 22.08.2019ರಂದು ಸಂಜೆ 3/4 ಗಂಟೆಗೆ ತೆಗೆದುಕೊಂಡರು. ಮಹಜರಗೆ ಚಾಸಾ-7 ಮತ್ತು ಇತರರು ರುಜು ಮಾಡಿರುತ್ತಾರೆ. ಆ ಸಿಡಿಯನ್ನು ಪ್ಲೆ ಮಾಡಿದಲ್ಲಿ ಅದರಲ್ಲಿರುವ ವ್ಯಕ್ತಿಯನ್ನು ಗುರುತಿಸಬಲ್ಲೆ. ಸಿಸಿಟಿವಿ ಇದ್ದ ಸ್ಥಳ ನಿಪಿ-8ರ ಫೋಟೋದಲ್ಲಿ ಇರುವ ಸ್ಥಳ ಇರುತ್ತದೆ. ಮಹಜರ ಸಮಯದಲ್ಲಿ ಫೋಟೋ ತೆಗೆದಿದ್ದು, ಅದು ನಿಪಿ-9ರಲ್ಲಿ ಇರುತ್ತದೆ.

(ಈ ಹಂತದಲ್ಲಿ ಸಿಡಿಯಲ್ಲಿ ಇರುವ ಮಾಹಿತಿಗಳನ್ನು ಡಿಸ್‌ಪ್ಲೆ ಮಾಡುವ ಸಲುವಾಗಿ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಯಿತು).

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**17.11.2021.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.